

# ಅಂಚೆ ಮೂಲಕ ಈಜು ಕಲಿಯಿರಿ

ಸೋಮಶೇಖರ್ ಪಡುಕರೆ
ಕಲೆ: ಸಂತೋಷ್ ಸಸಿಹಿತ್ಲು

ಕಚೇರಿಯಲ್ಲಿ ಊಟ ಮುಗಿಸಿ ಹರಟೆ ಹೊಡೆಯುತ್ತಿರುವಾಗ, ಯಾರೋ 'ಆನೆ ಮೊಟ್ಟೆ ಇಡುತ್ತದಾ?' ಎಂಬ ಪ್ರಶ್ನೆ ಕೇಳಿದರು. ಎಲ್ಲರೂ ನಗುತ್ತ 'ಇಲ್ಲ' ಎಂಬ ಉತ್ತರ ಕೊಟ್ಟರಲ್ಲದೆ, 'ಆನೆ ಮರಿ ಹಾಕುತ್ತದೆ ಎಂಬ ಕಾಮನ್‌ಸೆನ್ಸ್ ಇಲ್ವ' ಎಂದು ಉತ್ತರ ನೀಡಿದರು. ಆದರೆ ನಮ್ಮ ನೆಟ್ ನಾಗ ಮಾತ್ರ ಮೊಬೈಲ್‌ನಲ್ಲಿ ಏನೋ ಹುಡುಕುತ್ತಲೇ ಇದ್ದ.

'ಲೋ ಬೇಕೂಫಗಳಾ, ಆನೆ ಮೊಟ್ಟೆ ಇಡುತ್ತದೆ, ನೋಡಿ' ಎಂದು ಸ್ಕ್ರೀನ್ ಅಗಲಿಸಿ ಆನೆ ಮೊಟ್ಟೆ ಇಡುವ ಚಿತ್ರವನ್ನು ಎಲ್ಲರಿಗೆ ಕಾಣುವಂತೆ ತೋರಿಸಿದ. ಅದು ಫೋಟೊಶಾಪ್‌ನಲ್ಲಿ ಮಾಡಿದ್ದು ಎಂಬ ಉತ್ತರ ಬಂದರೂ ನೆಟ್ ನಾಗ ಮಾತ್ರ, 'ಇಂಥ ಯೋಚನೆ ಮಾಡಬೇಕಾದರೆ ಯಾವುದಾದರೂ ಆನೆ ಮೊಟ್ಟೆ ಇಟ್ಟಿರಲೇಬೇಕು, ಅದು ಆನ್‌ಲೈನ್‌ನಲ್ಲಿ ಸಿಗುತ್ತೆ ಎಂದರೆ, ಇಡೀ ಜಗತ್ತಿಗೂ ಗೊತ್ತಿರುತ್ತದೆ' ಎಂದು ತನ್ನ ವಾದವನ್ನೇ ಮುಂದುವರಿಸಿದ. ಏನ್ ಮಾಡೋದು ನೆಟ್ ನಾಗನನ್ನು ಸಮಾಧಾನಿಸಲು, 'ಹೌದು, ಆನೆಗಳು ಸಾಮಾನ್ಯವಾಗಿ ಮರಿ ಹಾಕುತ್ತವೆ, ಆದರೆ ಆನ್‌ಲೈನ್‌ನಲ್ಲಿ ಮಾತ್ರ ಮೊಟ್ಟೆ ಇಡುತ್ತವೆ' ಎಂದಾಗ ಆತ ಸುಮ್ಮನಾದ.

ಆನ್‌ಲೈನ್‌ನಲ್ಲಿ ಶಿಕ್ಷಣ ಬಂದಾಗಿನಿಂದ ಮಕ್ಕಳು ಶಾಲಾ ಶಿಕ್ಷಕರಿಗೆ ಹೆಚ್ಚಿನ ಒತ್ತು ನೀಡುತ್ತಿಲ್ಲ. ಶಿಕ್ಷಕರೂ ಮಕ್ಕಳು ಆನ್‌ಲೈನ್‌ನಲ್ಲಿ ಹುಡುಕಿಕೊಳ್ಳುತ್ತಾರೆಂದು ಹೆಚ್ಚು ಆಳಕ್ಕೆ ಇಳಿದು ಪಾಠ ಮಾಡುವುದೂ ಕೆಲವು ಕಡೆ ಕಡಿಮೆಯಾಗಿದೆ.

ಕೊರೊನಾ ಸಮಯದಲ್ಲಿ ಕರಾಟೆಪಟುವೊಬ್ಬರು 'ಆನ್‌ಲೈನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದೆ' ಎಂದು ಫೋಟೊ ಕಳುಹಿಸಿದಾಗ ನನಗೆ ಅಚ್ಚರಿಯಾಯಿತು. 'ಇರಲಿ, ಎದುರಾಳಿಗೆ ಹೇಗೆ ಕಿಕ್ ಹೊಡೆದೆ?' ಎಂದು ಕೇಳಿದೆ. 'ಮನೆಯಲ್ಲಿ ಕಿಕ್ ಆ್ಯಕ್ಷನ್ ಮಾಡಿ, ಅದರ ವಿಡಿಯೊ ಚಿತ್ರೀಕರಣ ಮಾಡಿ ಕಳುಹಿಸಿದೆ, ಅವರು ನನ್ನ ಆ್ಯಕ್ಷನ್ ನೋಡಿ ಅಂಕ ನೀಡಿದರು' ಎಂದು ಉತ್ತರಿಸಿದಾಗ ನನ್ನಲ್ಲಿ ಮಾತು ಇರಲಿಲ್ಲ.

ವಿವಿಧ ಕಾರಣಗಳಿಗಾಗಿ ಶಿಕ್ಷಣವನ್ನು ಅರ್ಧದಲ್ಲೇ ನಿಲ್ಲಿಸಿದವರಿಗೆ ಮೊದಲು ಅಂಚೆ ತೆರಪಿನ ಶಿಕ್ಷಣ ವರದಾನವಾಗಿತ್ತು. ಆಗ ಗುಣಮಟ್ಟವೂ ಉತ್ತಮವಾಗಿತ್ತು. ಅಂಚೆ ಮೂಲಕ ಪರಿಕರಗಳನ್ನು ಕಳಿಸುತ್ತಿದ್ದರು. ಮೈಸೂರು ಎಮ್ಮೆ, ಧಾರವಾಡ ಎಮ್ಮೆ (ಎಂಎ) ಬಹಳ ಜನಪ್ರಿಯವಾಗಿತ್ತು. ಈಗ ಹಣ ಕೊಟ್ಟರೆ ಗೌರವ ಡಾಕ್ಟರೇಟುಗಳೂ ನಿಮಗೆ ಅಂಚೆ ಅಥವಾ ಆನ್‌ಲೈನ್‌ನಲ್ಲೇ ಸಿಗುತ್ತವೆ.

ನಮ್ಮ ತ್ಯಾಂಪಣ್ಣ ಅವರು ಅಂಚೆ ಮೂಲಕ